UNIVERSITY LIBRARY
Agri Newspaper Clippings
Friday 23-01-2026
For more information visit University Library Website
Web - uasbagrilibindia.org
E-mail- librarian@uasbangalore.edu.in

K'taka's 'Millets to Microchips' tableau to feature at Red Fort

TIMES NEWS NETWORK

Bengaluru: Highlighting Karnataka's journey towards self-reliance and balanced development, the state will present a tableau titled 'From Millets to Microchips', at the Bharat Parv event in Delhi's Red Fort on Jan 26 as part of Republic Day celebrations.

According to officials at the department of information and public relations, the

REPUBLIC DAY

tableau reflects Karnataka's progress across agriculture, education, science, industry and advanced technology. Information and public relations commissioner Hemant Nimbalkar said the tableau symbolises how the state combined traditional knowledge with cutting-edge innovation to build a strong, sustainable economy.

Karnataka is among the leading states in promoting cultivation of millets and other sources of nutritious food, while Bengaluru has emerged as a global hub for information technology, biotechnology and innovation.

The state has also gained prominence in electronics, microchip manufacturing and semiconductor research, positioning itself at the forefront of advanced technology. These achievements form the core narrative of the tableau.

The Karnataka tableau depicts a rising sun symbolising progress, large pots filled with millets representing agricultural prosperity, and a farmer's family showcasing rural strength.



Child rights' body seeks safety norms for celebration in schools

Akhilandeshwari | TNN

Bengaluru: Child Rights Trust (CRT) has urged the state govt to exercise utmost caution while involving children during Republic Day celebrations.

Recalling past tragedies in which 7-8 children were killed during the erection or removal of flagpoles, and flagging risks such as road accidents, adulterated food distribution and fire mishaps during festivities, CRT has sought dedicated safety guidelines. "Our objective is to ensure these tragedies are not repeated and that a strict safety protocol is enforced in the interest of children and students," said NV Vasudeva Sharma, CRT's executive director.

The trust has asked the govt to direct schools not to install flagpoles near power lines and to strictly prohibit children from climbing poles. It has also urged authorities to keep the electrical inspectorate, Escom officials and fire and emergency services personnel on alert for quick response.

Times of India Pg.09

ಜಿಕೆವಿಕೆಯಲ್ಲಿ ರೈತ ಸಂತೆ 25ಕ್ಕೆ

ಬೆಂಗಳೂರು: ಬೆಂಗಳೂರು ಕೃಷಿ ವಿಶ್ವವಿದ್ಯಾಲಯ ಪ್ರತೀ ತಿಂಗಳ ಕೊನೆಯ ಶನಿವಾರ ಆಯೋಜಿಸುತ್ತಾ ಬಂದಿರುವ 'ರೈತ ಸಂತೆ' ಕಾರ್ಯಕ್ರಮ ಈ ಬಾರಿ ಜ.25ರಂದು ನಿಗದಿಯಾಗಿದೆ. ಅಂದು ಜಿಕೆವಿಕೆ ಕ್ಯಾಂಪಸ್‌ನ ಗಣಪತಿ ದೇವಸ್ಥಾನದ ಬಳಿ ಬೆಳಗ್ಗೆ 7ರಿಂದ ಸಂಜೆ 4ರ ವರೆಗೆ ರೈತ ಸಂತೆ ನಡೆಯಲಿದೆ.

ಸಂತೆಯಲ್ಲಿ ರೈತರು ತಾವು ಬೆಳೆದ ವಿವಿಧ ಉತ್ಪನ್ನಗಳನ್ನು ನೇರವಾಗಿ ಗ್ರಾಹಕರಿಗೆ ಕೈಗೆಟಕುವ ದರದಲ್ಲಿ ಮಾರಾಟ ಮಾಡಲಿದ್ದಾರೆ. ಹೂವು-ಹಣ್ಣು, ಅವರೇಕಾಯಿ, ಕರಬೂಜ, ಕಲ್ಲಂಗಡಿ ಸೇರಿ ತೋಟಗಾರಿಕೆ ಬೆಳೆಗಳು, ತಾಜಾ ಸೊಪ್ಪು ತರಕಾರಿ ಮಾರಾಟ ಮಾಡಲು ವ್ಯವಸ್ಥೆ ಮಾಡಲಾಗಿದೆ. ಜತೆಗೆ ಸಿರಿಧಾನ್ಯ, ಕೃಷಿ ಬೆಳೆಗಳ ಮೌಲ್ಯವರ್ಧಿತ ಉತ್ಪನ್ನ, ಸಾವಯವ ಉತ್ಪನ್ನ, ಅಡಿಕೆ/ರೇಷ್ಮೆ/ಜೀನಿನ ಪದಾರ್ಥಗಳು ಲಭ್ಯವಿರಲಿದೆ ಎಂದು ವಿವಿಯ ಅಧಿಕಾರಿಗಳು ತಿಳಿಸಿದ್ದಾರೆ.

Vijaya Karnataka Pg.6B

ನಾಳೆ ರೈತ ಸಂತೆ

ಬೆಂಗಳೂರು: ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದಿಂದ ಜ.24 ರಂದು ಹೆಬ್ಬಾಳದ ಜಿಕೆವಿಕೆಯ ಗಣಪತಿ ದೇವಸಾನದ ಹತ್ತಿರ ಬೆಳಿಗ್ಗೆ 7 ರಿಂದ ಸಂಜೆ 4 ಗಂಟೆವರೆಗೂ ರೈತ ಸಂತೆ ಆಯೋಜಿಸಲಾಗಿದೆ. ಕಲ್ಲಂಗಡಿ ಹಣ್ಣು, ಅವರೆ ಕಾಯಿ, ಸಗಣಿಯ ಹಣತೆ, ರಾಜಮುಡಿ ಅಕ್ಕಿ, ಅಣಬೆ, ಹಣ್ಣುಹಾಗೂ ತರಕಾರಿಗಳ ಪಾನೀಯಗಳು, ಅಲಂಕಾರಿಕ ಮೀನು ಮರಿ, ಸಿರಿಧಾನ್ಯ ಉತ್ಪನ್ನಗಳು, ಜೈವಿಕ ಗೊಬ್ಬರಗಳು, ಕೃಷಿ ಯಂತ್ರೋಪಕರಣಗಳು, ಎರೆಹುಳು ಗೊಬ್ಬರ, ಅಡಿಕೆ ಮತ್ತು ರೇಷ್ಮೆಯ ಉತ್ಪನ್ನಗಳು ವಸ್ತುಗಳ ಪ್ರದರ್ಶನ ಮತ್ತು ಮಾರಾಟಕ್ಕೆ ವ್ಯವಸ್ಥೆ ಮಾಡಲಾಗಿದೆ.

Kannada Prabha Pg.02

ಮಿಲೆಟ್ ಮೈಕ್ರೋಚಿಪ್ ಸ್ತಬ್ಧಚಿತ್ರ

ಗಣರಾಜ್ಯೋತ್ಸವಕ್ಕೆ ಭಾರತ ಪರ್ವದಲ್ಲಿ ಕರ್ನಾಟಕದ ಟ್ಯಾಬ್ಲೋ ಪ್ರದರ್ಶನ

■ ವಿಜಯವಾಣಿ ಸುದ್ದಿಜಾಲ, ನವದೆಹಲಿ

ಕೃಷಿಯಿಂದ ಕೈಗಾರಿಕೆವರೆಗೆ ಹಾಗೂ ಆಧುನಿಕ ತಂತ್ರಜ್ಞಾನದ ಬಳಕೆಯಲ್ಲಿ ಕರ್ನಾಟಕ ರಾಜ್ಯ ಮುಂಚೂಣಿಯಲ್ಲಿರುವ ಪಯಣವನ್ನು ಸಂಕೇತಿಸುವ ಸಿರಿಧಾನ್ಯದಿಂದ ಮೈಕ್ರೋಚಿಪ್‌ವರೆಗೆ (ಮಿಲ್ಲೆಟ್ ಟು ಮೈಕ್ರೋಚಿಪ್) ಎನ್ನುವ ಪರಿಕಲ್ಪನೆಯುಳ್ಳ ಸ್ತಬ್ಧಚಿತ್ರವನ್ನು ಇದೇ ಜನವರಿ 26ರ ಗಣರಾಜ್ಯೋತ್ಸವದ ಅಂಗವಾಗಿ ದೆಹಲಿಯ ಕೆಂಪು ಕೋಟೆಯಲ್ಲಿ ಆಯೋಜಿಸುವ ಭಾರತ ಪರ್ವದಲ್ಲಿ ಕರ್ನಾಟಕ ಪ್ರದರ್ಶಿಸುತ್ತಿದೆ.

ಪ್ರತೀ ವರ್ಷ ನಡೆಯುವ ಗಣರಾಜ್ಯೋತ್ಸವ ಪಥಸಂಚಲನ ಹಾಗೂ ಭಾರತ ಪರ್ವದಲ್ಲಿ ಕರ್ನಾಟಕ ರಾಜ್ಯದ ವತಿಯಿಂದ ಪಾಲ್ಗೊಳ್ಳುವ ವಾರ್ತ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯು, ಈ ಬಾರಿ ಕೃಷಿ, ಶಿಕ್ಷಣ, ವಿಜ್ಞಾನ, ಉನ್ನತ ತಂತ್ರಜ್ಞಾನ ಹಾಗೂ ಮೈಕ್ರೋಚಿಪ್‌ಗಳ ಉತ್ಪಾದನೆಯಲ್ಲಿ ರಾಜ್ಯ ಸಾಧಿಸಿರುವ ಪ್ರಗತಿಯನ್ನು ಈ ಸ್ತಬ್ಧಚಿತ್ರದಲ್ಲಿ ತೋರಿಸಲಾಗಿದೆ. ಸಿರಿಧಾನ್ಯಗಳ ಉತ್ಪಾದನೆ ಮತ್ತು ಪೌಷ್ಟಿಕ ಆಹಾರದ ಬಳಕೆಯನ್ನು ಉತ್ತೇಜಿಸುವಲ್ಲಿ ಕರ್ನಾಟಕವು ದೇಶದ ಪ್ರಮುಖ ರಾಜ್ಯಗಳಲ್ಲಿ ಒಂದಾಗಿದ್ದು, ಮಾಹಿತಿ ತಂತ್ರಜ್ಞಾನ ಹಾಗೂ ಜೈವಿಕ ತಂತ್ರಜ್ಞಾನ ಕ್ಷೇತ್ರಗಳಲ್ಲಿಯೂ ಜಾಗತಿಕವಾಗಿ ಗಮನ ಸೆಳೆದಿರುವ ಹಿನ್ನೆಲೆ ಮೈಕ್ರೋಚಿಪ್, ಎಲೆಕ್ಟ್ರಾನಿಕ್ಸ್ ಹಾಗೂ ಸೆಮಿಕಂಡಕ್ಟರ್ ವಲಯಗಳಲ್ಲಿನ ಅವಿಷ್ಕಾರಗಳು ಕರ್ನಾಟಕವನ್ನು ಶ್ರೇಷ್ಠ ತಂತ್ರಜ್ಞಾನ ಕೇಂದ್ರವಾಗಿಸಿರುವ ಕಾರಣ ಇವೆಲ್ಲವನ್ನೊಳಗೊಂಡ ಸ್ತಬ್ಧಚಿತ್ರ ಈ ಬಾರಿ ಪ್ರದರ್ಶನಗೊಳ್ಳಲಿದೆ.

ಕಳೆದ 16 ವರ್ಷಗಳಿಂದ ಗಣರಾಜ್ಯೋತ್ಸವ ಪಥಸಂಚಲನ (ಎರಡು ಬಾರಿ ಭಾರತ ಪರ್ವ) ಪ್ರದರ್ಶನದಲ್ಲಿ ನಮ್ಮ ರಾಜ್ಯದ ಸ್ತಬ್ಧಚಿತ್ರಗಳು ಪ್ರದರ್ಶನಗೊಳ್ಳುತ್ತಿದ್ದು, ಈ ಬಾರಿ ಕಿತ್ತೂರು ರಾಣಿ ಚೆನ್ನಮ್ಮ ಮತ್ತು ರಾಣಿ ಅಬ್ಬಕ್ಕ ದೇವಿ, ಕರ್ನಾಟಕದ ಪುಷ್ಪ ವೈಭವ, ಹಲಗಲಿ ಬೇಡರು ಹಾಗೂ ಸಿರಿಧಾನ್ಯದಿಂದ ಮೈಕ್ರೋಚಿಪ್‌ವರೆಗೆ ಎಂಬ ನಾಲ್ಕು ವಿಷಯಗಳನ್ನು ರಾಜ್ಯ ಆಯ್ಕೆ ಮಾಡಿ ಕಳುಹಿಸಿದ್ದು, ಅಂತಿಮವಾಗಿ ಸಿರಿಧಾನ್ಯದಿಂದ ಮೈಕ್ರೋಚಿಪ್ ವರೆಗೆ ಎಂಬ ವಿಷಯದ ಸ್ತಬ್ಧಚಿತ್ರವನ್ನು ಅಂತಿಮಗೊಳಿಸಲಾಗಿದೆ.



ಪಥಸಂಚಲನದ ಬದಲಾಗಿ ಭಾರತಪರ್ವದಲ್ಲಿ ಟ್ಯಾಬ್ಲೋ ಭಾಗಿ

ಗಣರಾಜ್ಯೋತ್ಸವದ ಪಥಸಂಚಲನದಲ್ಲಿ ಭಾಗವಹಿಸಲು ಈ ಹಿಂದೆ ಎಲ್ಲಾ ರಾಜ್ಯಗಳಿಗೂ ಅವಕಾಶವಿತ್ತು. ಆದರೆ ಭದ್ರತೆ ಮತ್ತು ಅವಧಿಯ ಕಾರಣದಿಂದಾಗಿ ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳ ಸ್ತಬ್ಧಚಿತ್ರಗಳ ಸಂಖ್ಯೆಯನ್ನು ರಕ್ಷಣಾ ಸಚಿವಾಲಯವು 2022ನೇ ಸಾಲಿನಿಂದ 15 ರಾಜ್ಯಗಳಿಗೆ ಮಾತ್ರವೇ ಸೀಮಿತಗೊಳಿಸಿದೆ. ಒಂದು ವರ್ಷ ಪಥಸಂಚಲನ ಮತ್ತು ಒಂದು ವರ್ಷ ಭಾರತ ಪರ್ವದಲ್ಲಿ ಪ್ರದರ್ಶಿಸುವಂತೆ ಎಲ್ಲಾ ರಾಜ್ಯಗಳೊಂದಿಗೆ ಕೇಂದ್ರ ಸರ್ಕಾರ ಒಡಂಬಡಿಕೆ ಮಾಡಿಕೊಂಡಿದ್ದು, ಅದರಂತೆ ಕಳೆದ ವರ್ಷ ಪಥಸಂಚಲನದಲ್ಲಿ ಕರ್ನಾಟಕ ಸ್ತಬ್ಧಚಿತ್ರ ಪ್ರದರ್ಶನಗೊಂಡಿದ್ದರಿಂದ ಈ ವರ್ಷ ಕರ್ನಾಟಕದ ಸ್ತಬ್ಧಚಿತ್ರ ಭಾರತ ಪರ್ವದಲ್ಲಿ ಪ್ರದರ್ಶನಗೊಳ್ಳಲಿದೆ.

ಈ ಬಾರಿಯ ಸ್ತಬ್ಧಚಿತ್ರದಲ್ಲಿ ಏನಿದೆ

ಸ್ತಬ್ಧಚಿತ್ರದ ಮುಂಭಾಗದಲ್ಲಿ ಉದಯಿಸುತ್ತಿರುವ ಸೂರ್ಯ, ದೊಡ್ಡ ಮಡಕೆಗಳಲ್ಲಿ ಪ್ರದರ್ಶಿಸಲಾದ ವಿವಿಧ ಸಿರಿಧಾನ್ಯಗಳು ಕೃಷಿ ಸಮೃದ್ಧಿಯನ್ನು ತೋರಿಸುತ್ತವೆ. ಬೆಳೆದ ಫಸಲನ್ನು ಎತ್ತಿಹಿಡಿದಿರುವ ರೈತ ಗ್ರಾಮೀಣ ಶಕ್ತಿಯ ಚಿತ್ರಣವಾಗಿದ್ದಾರೆ. ಅಡುಗೆಯ ಮಾಲಿಕ್ಯೂಲ್‌ಗಳ ಮಾದರಿ ತಂತ್ರಜ್ಞಾನ ಸೂಚಿಸಿದರೆ, ಕೃತಕ ಬುದ್ಧಿಮತ್ತೆಯ ರೋಬೋಟ್ ಕಂಪ್ಯೂಟರ್‌ನಲ್ಲಿ ಕಾರ್ಯನಿರ್ವಹಿಸುವ ಚಿತ್ರಣವಿದೆ. ಇಕ್ಕೆಲಗಳಲ್ಲಿ ಬಾಹ್ಯಾಕಾಶ ಕ್ಷೇತ್ರವನ್ನು ಪ್ರತಿನಿಧಿಸುವ ರಾಕೆಟ್ ಮತ್ತು ವಿಜ್ಞಾನಿ, ಟೆಲಿಮೆಡಿಸಿನ್ ಮೂಲಕ ಮಾರ್ಗದರ್ಶನ ನೀಡುತ್ತಿರುವ ವೈದ್ಯೆ ಹಾಗೂ ಕೃಷಿ ಭೂಮಿಯಲ್ಲಿ ಡ್ರೋನ್ ಬಳಸುತ್ತಿರುವ ಮಹಿಳೆ, ಕೈಗಾರಿಕಾ ವಲಯವನ್ನು ಪ್ರತಿನಿಧಿಸುವಂತೆ ಯಂತ್ರೋಪಕರಣಗಳೊಂದಿಗೆ ಕಾರ್ಯನಿರ್ವಹಿಸುತ್ತಿರುವ ಕಾರ್ಮಿಕರು ಇದೀ ಸ್ತಬ್ಧಚಿತ್ರದ ಆಕರ್ಷಣೀಯ ಕೇಂದ್ರಬಿಂದುವಾಗಿದೆ.

ಪ್ರಶಸ್ತಿಗಳ ಸರಮಾಲೆ

- 2022ರಲ್ಲಿ ಸಾಂಪ್ರದಾಯಿಕ ಕಸೂತಿ ತೊಟ್ಟಿಲು ಸ್ತಬ್ಧಚಿತ್ರಕ್ಕೆ ದ್ವಿತೀಯ ಪ್ರಶಸ್ತಿ
- 2015ರಲ್ಲಿ ಚನ್ನಪಟ್ಟಣದ ಗೊಂಬೆಗಳ ಸ್ತಬ್ಧಚಿತ್ರಕ್ಕೆ ತೃತೀಯ ಪ್ರಶಸ್ತಿ
- 2012ರಲ್ಲಿ ದಕ್ಷಿಣ ಕನ್ನಡದ ಭೂತಾರಾಧನೆ ಸ್ತಬ್ಧಚಿತ್ರಕ್ಕೆ ತೃತೀಯ ಪ್ರಶಸ್ತಿ
- 2011ರಲ್ಲಿ ಬೀದರ್‌ನ ಪಾರಂಪರಿಕ ಕಲೆ ಬಿದರಿ ಸ್ತಬ್ಧಚಿತ್ರಕ್ಕೆ ದ್ವಿತೀಯ ಪ್ರಶಸ್ತಿ
- 2008ರಲ್ಲಿ ಹೊಯ್ಸಳ ವಾಸ್ತುಶಿಲ್ಪ ಸ್ತಬ್ಧಚಿತ್ರಕ್ಕೆ ದ್ವಿತೀಯ ಪ್ರಶಸ್ತಿ
- 2005ರಲ್ಲಿ ಬಾಹುಬಲಿಯ ಮಸ್ತಕಾಭಿಷೇಕ ಸ್ತಬ್ಧಚಿತ್ರಕ್ಕೆ ಪ್ರಥಮ
- ಒಂದೇ ಸ್ತಬ್ಧಚಿತ್ರಕ್ಕಾಗಿ ಮೂರು ಪ್ರಶಸ್ತಿ ಕರ್ನಾಟಕ 2008ರಲ್ಲಿ ಪಡೆದಿತ್ತು

Vijayavani Pg.6B

x.com/vijaykarnataka

ಅನ್ನ ನೀಡುವ ರೈತರಲ್ಲಿ 'ಭತ್ತ'ದ ಉತ್ಸಾಹ !

ಅಕ್ಕಿ ಉತ್ಪಾದನೆಯಲ್ಲಿ ಚೀನಾ ಮೀರಿಸಿದ ಭಾರತ



■ ಎಸ್.ಜೆ.ಕುರ್ಯ ಉಡುಪಿ
Subramanya.bhat@timesofindia.com

ದೇಶದ ಬೆನ್ನೆಲುಬಾಗಿ ಆರ್ಥಿಕತೆ, ಜಿಡಿಪಿಗೆ ಮಾತ್ರವಲ್ಲ 142 ಕೋಟಿ ಜನರಿಗೆ ಯೋಗ್ಯತೆಗನುಸಾರವಾಗಿ ಅನ್ನ ನೀಡುವ ರೈತರ ಮೇಟಿ ವಿದ್ಯೆಗೆ ಸಾಟಿಯಿಲ್ಲ!

ಬಡವರ, ಹಾವಾಡಿಗರ ದೇಶವೆಂದು ಮೂದಲಿಕೆಗೆ ಒಳಗಾಗಿದ್ದ ಆಹಾರಕ್ಕಾಗಿ ಶ್ರೀಮಂತ ರಾಷ್ಟ್ರಗಳ ಮೊರೆ ಹೋಗಿದ್ದ ಭಾರತ ಇಂದು ಚೀನಾವನ್ನೂ ಮೀರಿ ಜಗತ್ತಿನಲ್ಲೇ ಅಕ್ಕಿ ಉತ್ಪಾದನೆಯಲ್ಲಿ ನಂ.1 ಆಗಿದೆ.

2030ರೊಳಗೆ ಜಗತ್ತಿನ ರಾಷ್ಟ್ರಗಳ ಜನರ ಡೈನಿಂಗ್ ಟೇಬಲ್‌ನಲ್ಲಿ ಭಾರತದ ಆಹಾರ, ಹಣ್ಣು ತರಕಾರಿ ಇರಬೇಕೆನ್ನುವುದು ಕೇಂದ್ರ ಸರಕಾರದ ಗುರಿ. ಜಗತ್ತಿನ ಏಳು ಖಂಡ ರಾಷ್ಟ್ರಗಳ ಹಸಿವು ತಣಿಸುವಲ್ಲಿ ಭಾರತವೇ ದೊಡ್ಡಣ್ಣ. ಬ್ರಿಟಿಷರಿಂದ ಭಾರತಕ್ಕೆ ಸ್ವಾತಂತ್ರ್ಯ ದೊರೆತಾಗ ಅಕ್ಕಿ ಉತ್ಪಾದನೆ 20 ದಶಲಕ್ಷ ಮೆಟ್ರಿಕ್ ಟನ್‌ಗಳಷ್ಟಿತ್ತು, ಭತ್ತ ಉತ್ಪಾದನಾ ಕ್ಷೇತ್ರ 30.81 ದಶಲಕ್ಷ ಹೆಕ್ಟೇರ್‌ಗಳಿಂದ 48 ದಶಲಕ್ಷ ಹೆಕ್ಟೇರ್‌ಗಳಿಗೇರಿದೆ. ಬರ, ಯುದ್ಧದ ನೆಲೆಯಲ್ಲಿ ಅಕ್ಕಿ, ಗೋಧಿ ಬದಲು ಅನ್ಯ ಆಹಾರ ತಿಂದ ಕಥೆ ಹಿರಿಯರು ಹೇಳುತ್ತಾರೆ.

ಭಾರತ ಆಹಾರಕ್ಕಾಗಿ ಅಮೆರಿಕವನ್ನು ನೆಚ್ಚಿಕೊಂಡಿತ್ತು. ಆಸ್ಟ್ರೇಲಿಯಾ, ಅರ್ಜೆಂಟೀನಾದಿಂದಲೂ ಅಕ್ಕಿ, ಗೋಧಿ ಆಮದು ಮಾಡಲಾಗಿತ್ತು. ಆಹಾರ ಬಿಕ್ಕಟ್ಟು ತಲೆದೋರಿದಾಗ ಪ್ರಧಾನಿ ಲಾಲ್ ಬಹದ್ದೂರ್ ಶಾಸ್ತ್ರಿ ಉಪವಾಸಕ್ಕೂ ಕರೆ ನೀಡಿದ್ದರು, ಜನತೆಯೂ ಪಾಲಿಸಿದ್ದರು. ಬಳಿಕ ಹಸಿರುಕ್ರಾಂತಿ 1, 2ರ ಫಲ ದೇಶವನ್ನು ಆಹಾರ ಸ್ವಾವಲಂಬನೆಯ ಹಾದಿಯಲ್ಲಿ ಮುನ್ನಡೆಸಿದೆ.

1990ರ ನಂತರ ಭಾರತ ಅಕ್ಕಿ ಸಹಿತ ಆಹಾರ ರಫ್ತಿನಲ್ಲಿ ಮೈಲಿಗಲ್ಲು ಸ್ಥಾಪಿಸಿದೆ. ಪ್ರಸ್ತುತ 150ಕ್ಕೂ ಅಧಿಕ ದೇಶಗಳಿಗೆ ಭಾರತ ಆಹಾರ ರಫ್ತಿನಲ್ಲಿ ತೊಡಗಿದೆ. ಭತ್ತದ ಜಾಗತಿಕ ಒಟ್ಟು ಉತ್ಪಾದನೆಯಲ್ಲಿ ಭಾರತದ ಪಾಲು ಶೇ.28ರಷ್ಟಿದೆ. ಸಾವಯವ/ವಿಷಮುಕ್ತ ಆಹಾರದ ಗುರಿಯ ಹಾದಿಯಲ್ಲಿ

ಭಾರತ-ಚೀನಾ ಉತ್ಪಾದನೆ ಪ್ರಮಾಣ

ವರ್ಷ	ಭಾರತ (ದಶಲಕ್ಷ ಟನ್)	ಚೀನಾ (ದಶಲಕ್ಷ ಟನ್)
2021-22	**130**	149
2022-23	**136**	146
2023-24	**138**	145
2024-25	**150**	145
2025-26	**152**	146

ಭಾರತ ತನ್ನ ಜನರ ಜತೆಗೆ ಜಗತ್ತಿನ ರಾಷ್ಟ್ರಗಳ ಜನರಿಗೆ ಉಣಿಸುವಷ್ಟು ಆಹಾರ ಉತ್ಪಾದನೆಯಲ್ಲಿ ಸ್ವಾವಲಂಬನೆ ಹೊಂದಿದೆ. ಜಗತ್ತಿನ ರಾಷ್ಟ್ರಗಳ ಡೈನಿಂಗ್ ಟೇಬಲ್‌ನಲ್ಲಿ ಭಾರತೀಯ ಪ್ರಮುಖ ಆಹಾರಗಳಿರಬೇಕೆನ್ನುವುದು ಪ್ರಧಾನಿ ಮೋದಿ ಅವರ ಕನಸು. ಭಾರತ 172 ದೇಶಗಳಿಗೆ ಕೃಷಿ ಉತ್ಪನ್ನ ರಫ್ತು ಮಾಡುತ್ತಿದೆ.

-ಶೋಭಾ ಕರಂದ್ಲಾಜೆ
ಕೇಂದ್ರ ಸಹಾಯಕ ಸಚಿವೆ

ರಾಸಾಯನಿಕ ಬಳಕೆ ಕಡಿಮೆ ಮಾಡಿ ಸ್ವಚ್ಛ ಆರೋಗ್ಯಕರ ಆಹಾರವನ್ನು ಜಗತ್ತಿನ ರಾಷ್ಟ್ರಗಳಿಗೆ ಒದಗಿಸುವುದು ಭಾರತದ ಗುರಿಯಾಗಿದೆ. ಸಿಕ್ಕಿಂ ಸಾವಯವ ರಾಜ್ಯ. ದೇಶದ ಶೇ.50ಜನರು ಕೃಷಿಯಲ್ಲಿ ತಮ್ಮನ್ನು ತೊಡಗಿಸಿದ್ದು ಜಿಡಿಪಿಗೆ ಕೃಷಿ ಕೊಡುಗೆ ಕೇವಲ ಶೇ. 20.2. ಅನ್ನ, ಆಹಾರ ಎಲ್ಲರ ಹೊಟ್ಟೆ ತುಂಬಲು ಬೇಕು ಎನ್ನುವ ಅನಿವಾರ್ಯತೆಯನ್ನು ಮನಗಂಡರೂ ಕೃಷಿಗಿಂತ ವಾಣಿಜ್ಯ, ಸೇವಾ ಕ್ಷೇತ್ರಗಳಿಗೆ ಹೆಚ್ಚಿನ ಪ್ರಾಮುಖ್ಯತೆ ನೀಡುವುದು ಸಂಕಷ್ಟದ ದಿನಗಳಿಗೆ ಆಹ್ವಾನವಿತ್ತಂತೆ.

ಅತಿ ಹೆಚ್ಚು ಭತ್ತ ಬೆಳೆವ ರಾಜ್ಯಗಳು

- ತೆಲಂಗಾಣ: 16.87 ದಶಲಕ್ಷ ಟನ್
- ಪಶ್ಚಿಮ ಬಂಗಾಳ: 15.75 ದಶಲಕ್ಷ ಟನ್
- ಉತ್ತರ ಪ್ರದೇಶ: 20.9 ದಶಲಕ್ಷ ಟನ್
- ಮಧ್ಯಪ್ರದೇಶ: 15.6 ದಶಲಕ್ಷ ಟನ್
- ಪಂಜಾಬ್: 14 ದಶಲಕ್ಷ ಟನ್
- ಒಡಿಶಾ: 10 ದಶಲಕ್ಷ ಟನ್

ಅತಿ ಹೆಚ್ಚು ಭತ್ತ ಬೆಳೆವ ದೇಶಗಳು

- ಭಾರತ: 152 ದಶಲಕ್ಷ ಮೆಟ್ರಿಕ್ ಟನ್
- ಚೀನಾ: 146 ದಶಲಕ್ಷ ಮೆಟ್ರಿಕ್ ಟನ್
- ಬಾಂಗ್ಲಾ: 36 ದಶಲಕ್ಷ ಮೆಟ್ರಿಕ್ ಟನ್
- ಇಂಡೋನೇಷ್ಯಾ: 34 ದಶಲಕ್ಷ ಮೆಟ್ರಿಕ್ ಟನ್
- ವಿಯೆಟ್ನಾಂ: 26 ದಶಲಕ್ಷ ಮೆಟ್ರಿಕ್ ಟನ್

Vijayakaranataka Pg.Spl. 04

ಪ್ರಗತಿಪರ ಕೃಷಿಕ ಡಾ.ಎಂ.ಸಿ.ರಂಗಸ್ವಾಮಿ ಸಲಹೆ | ಹಾಸನದಲ್ಲಿ ಕೃಷಿಕ ಸಮಾಜದಿಂದ ರಾಜ್ಯಮಟ್ಟದ ಕಾರ್ಯಕಾರಿ ಸಮಿತಿ ಸಭೆ

ಪ್ರಾದೇಶಿಕ ಕೃಷಿ ನೀತಿ ಅಗತ್ಯ



ಅರಕಲಗೂಡಿನಲ್ಲಿ ರಾಜ್ಯಮಟ್ಟದ ಕರ್ನಾಟಕ ಪ್ರದೇಶ ಕೃಷಿಕ ಸಮಾಜದ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಮಗ್ಗ ಗ್ರಾಮದ ಪ್ರಗತಿಪರ ರೈತ ಡಾ. ಎಂ.ಸಿ.ರಂಗಸ್ವಾಮಿ ಮಾತನಾಡಿದರು.

■ **ವಿಕ ಸುದ್ದಿಲೋಕ** ಹಾಸನ

ಪ್ರಾದೇಶಿಕ ವಾತಾವರಣದ ಆಧಾರದ ಅನ್ವಯ ಬೇಸಾಯದ ಅನುಭವಗಳಿಂದ ಕೃಷಿ ನೀತಿ ರೂಪಿಸುವ ಅಗತ್ಯವಿದೆ ಎಂದು ಪ್ರಗತಿಪರ ಕೃಷಿಕ ಡಾ.ಎಂ.ಸಿ. ರಂಗಸ್ವಾಮಿ ಹೇಳಿದರು.

ನಗರದಲ್ಲಿ ಕರ್ನಾಟಕ ಪ್ರದೇಶ ಕೃಷಿಕ ಸಮಾಜದಿಂದ ಕೃಷಿಕ ಸಮಾಜದ ಆಡಳಿತಾಧ್ಯಕ್ಷ ಮಹದೇವಪ್ಪ ಅಧ್ಯಕ್ಷತೆಯ ರಾಜ್ಯಮಟ್ಟದ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಮಾತನಾಡಿದರು.

''ಪ್ರಸ್ತುತ ಕೃಷಿ ವಲಯಕ್ಕೆ ಅನುದಾನದ ಕೊರತೆ ಇದೆ. ವಿವಿಧ ವಲಯಗಳ ಸಮಸ್ಯೆಗಳಿಗೆ ಪ್ರಾದೇಶಿಕ ವಾತಾವರಣದ ಆಧಾರದ ಮೇಲೆ ಕೃಷಿ ತಜ್ಞರಿಂದ ಕೃಷಿ ನೀತಿ ರೂಪಿಸಬೇಕಿದೆ. ಪ್ರಸ್ತುತ ಕೃಷಿ ನೀತಿ, ನಿಯಮಾವಳಿ ಕೊರತೆ ರೈತರನ್ನು ಕಾಡುತ್ತಿದೆ,'' ಎಂದರು.

ಬೆಂಗಳೂರು ಕೃಷಿ ವಿವಿ ಮಾಜಿ ಕುಲಪತಿ ಡಾ.ಕೆ. ನಾರಾಯಣಗೌಡ, ''ರೈತರು ಬೆಳೆ ಬೆಳೆಯಲು ಮಾತ್ರ ಸೀಮಿತಗೊಳ್ಳದೆ ಸಂಘಟಿತರಾಗಿ ಮೌಲ್ಯವರ್ಧನೆ ಮಾಡಬೇಕು. ಮಾರುಕಟ್ಟೆ ಜ್ಞಾನ ಹೊಂದಬೇಕು. ಹಲಸು, ಹುಣಸೆ ಬೆಳೆಗಾರರ ಸಂಘಟನೆಗಳ ಮಾದರಿಯಲ್ಲಿ ಎಲ್ಲರೂ ಪ್ರಯತ್ನಿಸಬೇಕಿರುವುದು ಇಂದಿನ ಅನಿವಾರ್ಯ,'' ಎಂದು ಅಭಿಪ್ರಾಯಪಟ್ಟರು.

ನಿವೃತ್ತ ಐಎಎಸ್ ಅಧಿಕಾರಿ ಡಾ.ರಾಮೇಗೌಡ, ''ಬಜೆಟ್‌ನಲ್ಲಿ ರೈತರ ಆದ್ಯತೆಯನ್ನು ಗುರುತಿಸಿ ಕ್ರಮಬದ್ಧವಾಗಿ ಕಾರ್ಯಕ್ರಮ ರೂಪುಗೊಳಿಸಲು ಸರಕಾರವನ್ನು ಒತ್ತಾಯಿಸಬೇಕು,'' ಎಂದರು.

ಐಐಎಚ್‌ಆರ್ ನಿವೃತ್ತ ಪ್ರಧಾನ ಕೃಷಿ ವಿಜ್ಞಾನಿ ಡಾ.ಬಿ.ನಾರಾಯಣಸ್ವಾಮಿ, ''ಸಮಗ್ರ ಬೇಸಾಯದ ವೈಜ್ಞಾನಿಕ ಕ್ರಮಗಳ ಅಳವಡಿಕೆಯಿಂದ ಮಾತ್ರ ರೈತರಿಗೆ ಉಳಿಗಾಲ,'' ಎಂದರು.

''ತಂತ್ರಜ್ಞಾನವನ್ನು ಸಕಾಲದಲ್ಲಿ ಉತ್ಕೃಷ್ಟ ಆಯವ್ಯಯಗಳ ಜ್ಞಾನದೊಂದಿಗೆ ಅನುಸರಿಸಿ ಕೃಷಿಕರು, ಉದ್ಯಮಿಗಳ ಮನೋಭಾವ ಹೊಂದ ಬೇಕು,'' ಎಂದು ಸಲಹೆ ನೀಡಿದರು.

''ನಮ್ಮ ಅವಿಭಕ್ತ ಕುಟುಂಬ ರಾಜ್ಯದಲ್ಲಿ ಹೆಸರು ವಾಸಿಯಾಗಲು ಶಿಕ್ಷಣ ಮತ್ತು ಶ್ರಮದ ಜೀವನ ಕಾರಣ,'' ಎಂದು ಡಾ.ಎಂ.ಸಿ. ರಂಗಸ್ವಾಮಿ ಅವರ ಸಹೋದರ ಕೃಷ್ಣೇಗೌಡ ಅಭಿಪ್ರಾಯಪಟ್ಟರು.

ನಾನಾ ಜಿಲ್ಲೆಯ ಜಿಲ್ಲಾಪ್ರಕ್ಷರುಗಳು ಕೃಷಿ ಸಮಸ್ಯೆ ಕುರಿತು ಚರ್ಚಿಸಿದರು. ಯುವ ಉದ್ಯಮಿ ಎಂ.ಆರ್.ಶಿರೀನ್ ರಂಗಸ್ವಾಮಿ, ಎಂ.ಕೆ.ವಿದ್ವಾನ್, ಶಿವಣ್ಣ, ಡಾ.ಸಾದಿಕ್, ನಾಗರಾಜ್ ತಮ್ಮ ಅನುಭವ ಹಂಚಿಕೊಂಡರು.

ಸಿಎಂಗೆ ಸಭೆಯ ಶಿಫಾರಸು ಮಂಡನೆ: ರಾಜ್ಯ ಪ್ರದೇಶ ಕೃಷಿಕ ಸಮಾಜದ ಆಡಳಿತಾಧ್ಯಕ್ಷ ಮಹದೇವಪ್ಪ ಮಾತನಾಡಿ, ''ಸಭೆಯಲ್ಲಿ ಚರ್ಚೆಯಾದ ಎಲ್ಲ ವೈಜ್ಞಾನಿಕ ಅಂಶಗಳನ್ನು ದಾಖಲಿಸಲಾಗುವುದು. ಹಾಗೆಯೇ ತಜ್ಞರು, ವಿಜ್ಞಾನಿಗಳು, ಆಡಳಿತಗಾರರು ಹಾಗೂ ರೈತ ಮುಖಂಡರನ್ನು ಸೇರಿಸಿಕೊಂಡು ಈ ಶಿಫಾರಸುಗಳನ್ನು ಕೃಷಿ ಸಚಿವರು ಹಾಗೂ ಮುಖ್ಯಮಂತ್ರಿಗೆ ಒಪ್ಪಿಸುವ ಮೂಲಕ ರೈತರ ಪ್ರಗತಿಗೆ ವಿಶೇಷ ಬಜೆಟ್ ರೂಪುಗೊಳ್ಳುವಂತೆ ಪ್ರಯತ್ನಿಸ ಲಾಗುವುದು,'' ಎಂದರು.

Vijayakarnataka Pg.04

ನೈಸರ್ಗಿಕ ಕೃಷಿ ಉತ್ತೇಜನಕ್ಕೆ ವಿಶೇಷ ಯೋಜನೆ: ವೈದ್ಯ ಸಚಿವ

ನೈಸರ್ಗಿಕ ಕೃಷಿ ಕುರಿತ ರಾಷ್ಟ್ರೀಯ ಸಮಾವೇಶ

ಸಂ.ಕ.ಸಮಾಚಾರ, ಬೆಂಗಳೂರು

ಕರ್ನಾಟಕದಲ್ಲಿ ಜೀವನೋಪಾಯಕ್ಕೆ ಅದರಲ್ಲೂ ಮಹಿಳೆಯರ ಜೀವನೋಪಾಯಕ್ಕೆ ಹೆಚ್ಚು ಆದ್ಯತೆ ನೀಡಲಾಗುತ್ತಿದೆ. ಇದರ ಜೊತೆಗೆ ನೈಸರ್ಗಿಕ ಕೃಷಿ ಪದ್ಧತಿಯ ಬಗ್ಗೆ ವಿಶೇಷ ಯೋಜನೆಗಳನ್ನು ಜಾರಿಗೆ ತರಲಾಗಿದೆ ಎಂದು ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣ್ ಪ್ರಕಾಶ್ ಆರ್. ಪಾಟೀಲ್ ಹೇಳಿದರು.

ಕೇಂದ್ರ ಸರ್ಕಾರದ ಗ್ರಾಮೀಣಾಭಿವೃದ್ಧಿ ಸಚಿವಾಲಯ ಮತ್ತು ಕರ್ನಾಟಕ ಸರ್ಕಾರದ ಜೀವನೋಪಾಯ ಮತ್ತು ಉದ್ಯಮಶೀಲತೆ ಇಲಾಖೆ ಜಂಟಿಯಾಗಿ ನೈಸರ್ಗಿಕ ಕೃಷಿ ಕುರಿತ ರಾಷ್ಟ್ರೀಯ ಸಮಾವೇಶದಲ್ಲಿ ಭಾಗಿಯಾಗಿ ಮಾತನಾಡಿದ ಅವರು, ಎಲ್ಲ ಕ್ಷೇತ್ರದಲ್ಲಿಯೂ ಮಹಿಳೆಯರ ಪ್ರಾಬಲ್ಯ ಹೆಚ್ಚಿದೆ. ನೈಸರ್ಗಿಕ ಕೃಷಿ ಪದ್ಧತಿಯಲ್ಲಿಯೂ ಯಶಸ್ಸು ಕಾಣುತ್ತಿದ್ದಾರೆ. ಕರ್ನಾಟಕದಲ್ಲಿ, ಮಹಿಳೆಯರು ಈ ರೂಪಾಂತರದ ಕೇಂದ್ರದಲ್ಲಿದ್ದಾರೆ ಎಂದು ಸಚಿವರು ತಿಳಿಸಿದರು.

ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಅಭಿಯಾನ-ಸಂಜೀವಿನಿ ಮೂಲಕ ಮಹಿಳಾ ಸ್ವಸಹಾಯ ಗುಂಪುಗಳು ರಾಸಾಯನಿಕ-ಮುಕ್ತ, ಕಡಿಮೆ-ವೆಚ್ಚದ ನೈಸರ್ಗಿಕ ಕೃಷಿಯನ್ನು ಅಭ್ಯಾಸ ಮಾಡುತ್ತಿವೆ, ಕೃಷಿ ಸಖಿಗಳು ಮತ್ತು ಸಮುದಾಯ ಸಂಪನ್ಮೂಲ ವ್ಯಕ್ತಿಗಳಾಗಿ ಸೇವೆ ಸಲ್ಲಿಸುತ್ತಿವೆ ಮತ್ತು ಜೈವಿಕ-ಇನ್‌ಪುಟ್ ಉತ್ಪಾದನೆ ಮತ್ತು ಮೌಲ್ಯವರ್ಧನೆಯಲ್ಲಿ ಪ್ರಮುಖ ಉದ್ಯಮಗಳನ್ನು ನಡೆಸುತ್ತಿವೆ. ಇದು ಗಮನಾರ್ಹ ವಿಷಯ ಎಂದು ವಿವರಿಸಿದರು.

ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ಮಾತನಾಡಿ, ಕೃಷಿ ಇಲಾಖೆಯಲ್ಲಿ ಈಗಾಗಲೇ ಹಲವಾರು ಯೋಜನೆಗಳನ್ನು ಜಾರಿಗೆ ತರಲಾಗಿದೆ. ನೈಸರ್ಗಿಕ ಕೃಷಿಗೆ ಆದ್ಯತೆ ನೀಡಲು ಹೆಚ್ಚುಕ್ರಮ ಮಹಿಸಲಾಗುತ್ತದೆ ಎಂದರು. ಕರ್ನಾಟಕದಲ್ಲಿ ಕೃಷಿ ವಲಯಕ್ಕೆ ಧಾರಾಳ ಅನುದಾನವನ್ನು ಒದಗಿಸಲಾಗುತ್ತದೆ. ರೈತರು ಹಾಗೂ ಪ್ರಮುಖವಾಗಿ ರೈತ ಮಹಿಳೆಯರಿಗೆ ಸೌಲಭ್ಯಗಳನ್ನು ನೀಡಿ, ಸಬಲೀಕರಣಕ್ಕೆ ನಮ್ಮ ಸರ್ಕಾರ ಆದ್ಯತೆ ಒದಗಿಸಲಿದೆ ಎಂದರು.

ಈ ವೇಳೆ ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್, ಕೇಂದ್ರ ಗ್ರಾಮೀಣಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಕಾರ್ಯದರ್ಶಿ ಟಿ.ಕೆ. ಅನಿಲ್ ಕುಮಾರ್, ಜಂಟಿ ಕಾರ್ಯದರ್ಶಿ ಸ್ವಾತಿ ಶರ್ಮಾ, ಕಾರ್ಯದರ್ಶಿ ಮನೋಜ್ ಕುಮಾರ್ ಮೀನಾ, ಅಭಿಯಾನದ ನಿರ್ದೇಶಕ ಆರ್. ಸ್ನೇಹಲ್ ಮತ್ತು ಹೆಚ್ಚುವರಿ ಅಭಿಯಾನ ನಿರ್ದೇಶಕ ಶ್ರೀನಿವಾಸ್ ಹಾಜರಿದ್ದರು.



ನೈಸರ್ಗಿಕ ಕೃಷಿ ಕುರಿತ ರಾಷ್ಟ್ರೀಯ ಸಮಾವೇಶವನ್ನು ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣ್ ಪ್ರಕಾಶ್ ಆರ್. ಪಾಟೀಲ್, ಕೃಷಿ ಸಚಿವ ಚಲುವರಾಯಸ್ವಾಮಿ ಅವರು ಉದ್ಘಾಟಿಸಿದರು.

Samyukta Karnataka Pg.07

Watch out! Superfood Makhana to go national, on parade at Kartavya Path

RAJESH KUMAR THAKUR @ New Delhi



BIHAR'S most renowned aqua-agro product, makhana, is set to feature prominently in the tableaux display on this year's Republic Day parade.

Given the growing global demand for makhana due to its rich nutritional value and the state's top-ranked position in its cultivation, the tableau is expected to be a major attraction at the Bharat- Parv.

According to official sources, the state government has chosen makhana as the theme of the state's tableau this year, showcasing how this so-called superfood is moving from local markets to global demand. The tableau will present, in a living and visual form, the complete journey of makhana—from the ponds of Mithilanchal to international recognition.

It will depict traditional cultivation practices, harvesting, processing, roasting, cracking and packaging, while also highlighting local labour, women's participation and indigenous knowledge systems.

Officials stated that makhana, also known as fox- nut, symbolises Bihar's distinctive agricultural heritage, with the state contributing nearly 90% of the country's total makhana production. "This tableau shows how the traditional agricultural produce of Bihar is today making its strong presence felt in the national and international markets as a nutrition-rich superfood", an official remarked.

He further said, "In line with the spirit of 'One India, Best India', the tableau of Bihar gives the message that through the confluence of tradition, hard work and innovation, local livelihoods can be given global recognition".

This year, a total of 30 tableaux will showcase India's indigenous development, economic growth and progress towards self-reliance. Of these, 17 will be from states and Union Territories, while 13 will represent central ministries and departments, all displayed along Kartavya Path. One of the highlights of the parade will be the Indian Air Force veterans' tableau, offering a glimpse into the invaluable contributions made by veterans to the nation. In addition, as per official figures, around 2,500 cultural artists will perform at Kartavya Path.

The themes for the performances include The Mantra of Self-Reliance—Vande Matram and The Mantra of Prosperity —Aatmnirbharata. Among the invited guests will be construction workers of the Kartavya Bhawan.

Indian Express Pg.11